# ಕರ್ನಾಟಕವಿಧಾನಪರಿಷತ್ತು

| | | |
|---|---|---|
| 1 | **ಮಾನ್ಯ ಸದಸ್ಯರ ಹೆಸರು** | **ಡಾ: ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು)** |
| 2 | **ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ** | **914** |
| 3 | **ಉತ್ತರಿಸಬೇಕಾದ ದಿನಾಂಕ** | **14-03-2025** |
| 4 | **ಉತ್ತರಿಸುವ ಸಚಿವರು** | **ಕಾರ್ಮಿಕ ಸಚಿವರು** |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಕಾರ್ಮಿಕರೆ ಹೆಚ್ಚಾಗಿ ನೆಲೆಸಿರುವ ಕಲಬುರಗಿ ಜಿಲ್ಲೆಯ ಶಹಾಬಾದ ಪಟ್ಟಣದಲ್ಲಿ ಸುಸಜ್ಜಿತವಾದ ಇಎಸ್‌ಐ ಆಸ್ಪತ್ರೆ ನಿರ್ಮಾಣಗೊಂಡಿದ್ದು ಅದನ್ನು ಸಾರ್ವಜನಿಕರ ಆರೋಗ್ಯ ಸೇವೆಗೆ ಉಪಯೋಗಿಸದಿರಲು ಕಾರಣಗಳೇನು; | ಕಲಬುರಗಿ ಜಿಲ್ಲೆಯ ಶಹಬಾದ್ ಪಟ್ಟಣದಲ್ಲಿ 50 ಹಾಸಿಗೆಗಳ ಆಸ್ಪತ್ರೆಯನ್ನು ದಿನಾಂಕ 5.6.1998 ರಲ್ಲಿ ಪ್ರಾರಂಭಿಸಲಾಯಿತು. ನಂತರದ ದಿನಗಳಲ್ಲಿ ಆಸ್ಪತ್ರೆಯ ಸುತ್ತಮುತ್ತಲು ನಡೆಯುತ್ತಿದ್ದ ಕಾರ್ಖಾನೆಗಳು ಮುಚ್ಚಿದ್ದರಿಂದ ವಿಮಾದಾರರ ಸಂಖ್ಯೆ ಕಡಿಮೆಯಾದ ಕಾರಣದಿಂದಾಗಿ ಸದರಿ ಆಸ್ಪತ್ರೆಯ ಸೇವೆಯನ್ನು 2004ರಲ್ಲಿ ಸ್ಥಗಿತಗೊಳಿಸಲಾಗಿದೆ.<br><br>ಶಹಬಾದ್ ಪಟ್ಟಣವು ಕಲಬುರಗಿ ಕಾರಾವಿ ವೈದ್ಯಕೀಯ ಕಾಲೇಜು ಹಾಗು ಆಸ್ಪತ್ರೆಯಿಂದ ಸುಮಾರು 32 ಕಿ.ಮೀ. ಅಂತರದಲ್ಲಿರುವುದರಿಂದ ಕಾ.ರಾ.ವಿ. ಆಸ್ಪತ್ರೆ ಪ್ರಾರಂಭಿಸಲು ಕಾ.ರಾ.ವಿ. ನಿಗಮದ ಮಾನದಂಡದ ಪ್ರಕಾರ ಅವಕಾಶವಿರುವುದಿಲ್ಲ. |
| (ಆ) | ಈಗಾಗಲೇ ಸುಮಾರು ರೂ.12.00 ಕೋಟಿಯಷ್ಟು ಆಧುನಿಕ ಯಂತ್ರೋಪಕರಣ ಗಳನ್ನು ಪೂರೈಸಿ ಎರಡು ವರ್ಷ ಕಳೆದರೂ ಇನ್ನು ಉಪಯೋಗವಾಗದೆ ದುಸ್ಥಿತಿಗೆ ತಲುಪಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕಾ.ರಾ.ವಿ. ನಿಗಮದಿಂದ ಉಪಕರಣಗಳ ಖರೀದಿಗಾಗಿ ಯಾವುದೇ ಅನುದಾನ ಬಿಡುಗಡೆ ಮಾಡಿರುವುದಿಲ್ಲ. |
| (ಇ) | ಕಟ್ಟಡ ನಿರ್ಮಾಣಕ್ಕೆ ಮತ್ತು ಆಧುನಿಕ ಯಂತ್ರೋಪಕರಣ ಖರೀದಿಗೆ ವೆಚ್ಚ ಮಾಡಿದ ಸಾರ್ವಜನಿಕರ ಹಣ ಕಾರ್ಮಿಕರಿಗೂ ಮತ್ತು ಸುತ್ತಮುತ್ತಲು ಇರುವ ಹಳ್ಳಿಗಳ ಜನರಿಗೆ ಉಪಯೋಗವಾಗುವಂತೆ ಮಾಡಲು ಯಾವ ಕ್ರಮಗಳನ್ನು ಕೈಗೊಳ್ಳಲಾಗುವುದು; | ಪರಿಶೀಲಿಸಿ, ಅಗತ್ಯ ಕ್ರಮ ಕೈಗೊಳ್ಳಲಾಗುವುದು. |
| (ಈ) | ಶಹಾಬಾದ ಪಟ್ಟಣದ ಇಎಸ್‌ಐ ಆಸ್ಪತ್ರೆ ರಾಜ್ಯ ಸರ್ಕಾರವು ತನ್ನ ಅಧೀನಕ್ಕೆ ಪಡೆದು ಅದನ್ನು ನೂತನ ತಾಲ್ಲೂಕಾದ ಶಹಾಬಾದನ ತಾಲೂಕು ಆಸ್ಪತ್ರೆ ಮತ್ತು ತಾಲೂಕು ಆರೋಗ್ಯ ಕಛೇರಿಯನ್ನಾಗಿ ಬಳಸಲು ಸೂಕ್ತ ಕ್ರಮಗಳನ್ನು ಕೈಗೊಳ್ಳುವುದೆ? | ಕಾರಾವಿ ನಿಗಮ, ನವದೆಹಲಿ, ಇವರಿಗೆ ಪ್ರಸ್ತಾವನೆಯನ್ನು ಸಲ್ಲಿಸಿ, ಮುಂದಿನ ಕ್ರಮ ಕೈಗೊಳ್ಳಲಾಗುವುದು. |

**ಕಡತ ಸಂಖ್ಯೆ: ಕಾಇ 58 ಎಲ್‌ಎಸ್‌ಐ 2025.**

**(ಸಂತೋಷ್ ಎಸ್ ಲಾಡ್)**
ಕಾರ್ಮಿಕಸಚಿವರು.